# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

ನಂ. 17/1, 1ನೇ ಮಹಡಿ, ಹೊಸ ಗುಡ್ಡದಹಳ್ಳಿ ಬಸ್ ನಿಲ್ದಾಣದ ಹತ್ತಿರ,
ಮೈಸೂರು ರಸ್ತೆ, ಬೆಂಗಳೂರು-26. ದೂ: 26745242

# 2012 - 2013 ರ ಸಾಲಿನ ತುಟ್ಟಿಭತ್ಯೆ (ಡಿ.ಎ)

ಪ್ರತಿವರ್ಷದಂತೆ ಈ ವರ್ಷವೂ (2012–2013) ಡಿ.ಎ ಹೆಚ್ಚಾಗಿದೆ. ಪ್ರತಿಯೊಬ್ಬ ಕಾರ್ಮಿಕರಿಗೂ ಅವರ ಮೇ ತಿಂಗಳ ವೇತನದಲ್ಲಿ ರೂ. 408 ಗಳನ್ನು (ದಿನಕ್ಕೆ ರೂ. 15.69) ಸೇರಿಸಿ ಕೊಡಬೇಕು. ಕಳೆದ ವರ್ಷಗಳಲ್ಲಿ ಈ ಹೆಚ್ಚಾದ ಡಿ.ಎ.ಯನ್ನು ಎಲ್ಲಾ ಕಾರ್ಮಿಕರಿಗೂ ಕೊಡದೆ ಆಡಳಿತವರ್ಗದವರು ವಂಚಿಸಿದ್ದಾರೆ. ಕಾರ್ಮಿಕರನ್ನು ವಂಚಿಸುವ ಪರಿ ಹೇಗಿದೆಯೆಂದರೆ. ಇತರೆ ಭತ್ಯೆಗಳನ್ನು ಕಡಿತಗೊಳಿಸಿ ಅದೇ ಮೊತ್ತವನ್ನು ಡಿ.ಎ.ಗೆ ಸೇರಿಸಿ, ನೀಡುತ್ತಿದ್ದಾರೆ. ಆದರೆ ಕಾರ್ಮಿಕರ ವೇತನದಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲ. ಕೇವಲ ಅಂಕಿ ಸಂಖ್ಯೆಗಳು ಮಾತ್ರ ಬದಲಾಗುತ್ತವೆ.

ಈ ವರ್ಷವೂ ಅದೇ ರೀತಿ ಮಾಡಿದರೆ, ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸಿ, ಅವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಡಿ.ಎಯನ್ನು ಪಡೆದುಕೊಳ್ಳಬೇಕು. ಕಳೆದ ವರ್ಷ ಕೆಲವು ಕಾರ್ಖಾನೆಗಳ ಕಾರ್ಮಿಕರು ಹೋರಾಟ ಮಾಡಿದುದರ ಫಲವಾಗಿ ಅವರಿಗೆ ಈ ಹೆಚ್ಚಳವಾದ ಡಿ.ಎಯನ್ನು ಪಡೆದುಕೊಂಡಿದ್ದಾರೆ. ಈ ಡಿ.ಎ ಹೆಚ್ಚಳವಾದ ವಿಷಯಕ್ಕೆ ಸಂಬಂಧ ಪಟ್ಟಂತೆ, ಮತ್ತು ಪ್ರತಿಯೊಬ್ಬ ಕಾರ್ಮಿಕರಿಗೂ 408 ರೂ. ಗಳನ್ನು ಕೊಡಲೇ ಬೇಕೆಂದು ಗಾಟು ಪತ್ರವನ್ನು ಬರೆಯುತ್ತದೆ. ಆದಾಗ್ಯೂ, ಕಾರ್ಮಿಕರಿಗೆ ಈ ಹೆಚ್ಚಳವಾದ ಡಿ.ಎ ಸಿಗಲಿಲ್ಲವೆಂದರೆ GATWU ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯನ್ನು ಈ ಕೆಳಕಂಡ ಸಂಖ್ಯೆಯಲ್ಲಿ ಸಂಪರ್ಕಿಸಬಹುದು.

**9880371922, 9844959210, 94824 44011**

2012 ರ ಮೇ ತಿಂಗಳಿನಿಂದ ಕಾರ್ಮಿಕರಿಗೆ ದೊರೆಯಬೇಕಾದ ಕನಿಷ್ಠ ವೇತನದ ವಿವರ

| ಕ್ರ ಸಂ. | ಕೆಲಸದ ಶ್ರೇಣಿ | ಮೂಲ ವೇತನ | ತುಟ್ಟಿಭತ್ಯೆ | ಒಟ್ಟು ವೇತನ ದಿನಕ್ಕೆ ರೂ. |
|---|---|---|---|---|
| 1. | ಅತಿಕುಶಲ-ಟೈಲರ್ ಗ್ರೇಡ್ 1 | 114.10 | 65.70 | 179.80 |
| 2. | ಕುಶಲ-ಟೈಲರ್ ಗ್ರೇಡ್ 2, 3 | 113.10 | 65.70 | 178.80 |
| 3. | ಅರೆಕುಶಲ (Semi Skilled) | | | |
| | ಮೆಷರ್‌ಮೆಂಟ್ ಚೆಕರ್/ಐರನರ್ ಕಾಜಾ/ ಬಟನ್/ ಓವರ್‌ಲಾಕ್/ ಮಷೀನ್ ಆಪರೇಟರ್/ | 111.50 | 65.70 | 177.20 |
| 4. | ಕುಶಲವಲ್ಲದ (Unskilled) | | | |
| | ಪ್ಯಾಕರ್/ ಹೆಲ್ಪರ್ / ಫೀಡಿಂಗ್ ಹೆಲ್ಪರ್/ಟ್ರಿಮ್ಮರ್ ಆಫೀಸ್ ಬಾಯ್/ಟೀ ಹಾಕುವವರು/ಕಸಗುಡಿಸುವವರು/ ಇತರೇ ಯಾವುದೇ ತರಬೇತಿಯಿಲ್ಲದ ಕಾರ್ಮಿಕರು | 106.80 | 65.70 | 172.50 |

**ಸೂಚನೆ:** ಕಾರ್ಮಿಕರೇ ಗಮನಿಸಿ, ಇದು ನಿಮ್ಮ ಕಾರ್ಖಾನೆಯಲ್ಲಿ ನೀಡುವ ಇನ್‌ಕ್ರಿಮೆಂಟ್ ಅಲ್ಲ, ಇದು ಸರ್ಕಾರದಿಂದ ಘೋಷಿತವಾದ ತುಟ್ಟಿಭತ್ಯೆ ಇದನ್ನು ಪಡೆಯಲು ನಿಮಗೆ ಕಾನೂನು ಪ್ರಕಾರ ಹಕ್ಕಿದೆ.

Scanned with OKEN Scanner